**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1950/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ನಾಗಮ್ಮ** | ಪ್ರಾಸಾಃ 6 |
| ಗಂಡನ ಹೆಸರು | | ಜವರಯ್ಯ | ಚಾಸಾಃ 6 |
| ವಯಸ್ಸು | | 55 ವರ್ಷ | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಹನುಮನಪುರ | ದಿಃ 11/06/2024 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ 1 ನನ್ನ ಮಗಳು. ಚಾಸಾ 1 ರವರನ್ನು 1 ನೇ ಆರೋಪಿಗೆ ಸುಮಾರು 10 ವರ್ಷಗಳ ಹಿಂದೆ ನೀಡಿ ಮದುವೆ ಮಾಡಿ ಕೊಟ್ಟಿರುತ್ತೇವೆ. ಚಾಸಾ 1 ರವರ ಮದುವೆಯನ್ನು ಹನುಮನಪುರ ಗ್ರಾಮದ ಮಂಟೆಸ್ವಾಮಿ ದೇವಸ್ಥಾನದಲ್ಲಿ ಮದುವೆ ಮಾಡಿ ಕೊಟ್ಟಿರುತ್ತೇವೆ. ಮದುವೆಯಾದ ನಂತರ ವರದಕ್ಷಿಣೆಗಾಗಿ ನನ್ನ ಮಗಳಿಗೆ ನನ್ನ ಅಳಿಯ ಮೂರ್ತಿ, ಅವರ ತಂದೆ ತಾಯಿ ಸಿದ್ದಯ್ಯ ಮತ್ತು ಕಮಲಮ್ಮ , ನಿಂಗರಾಜು ಮತ್ತು ರೇಖಾ ಕಿರುಕುಳ ನೀಡುತ್ತಿದ್ದರು. ವರದಕ್ಷಿಣೆ ಹಣ ಮತ್ತು ಚಿನ್ನವನ್ನು ತೆಗೆದುಕೊಂಡು ಬರುವಂತೆ ಆರೋಪಿತರು ನನ್ನ ಮಗಳಿಗೆ ಕಿರುಕುಳ ನೀಡುತ್ತಿದ್ದರು. ಆರೋಪಿತರು ನನ್ನ ಮಗಳಿಗೆ ವರದಕ್ಷಿಣೆಗೆ ಬೇಡಿಕೆ ಇಟ್ಟು ಬೈಯುವುದು, ಹೊಡೆಯುವುದು ಮಾಡುತ್ತಿದ್ದರು. 3 ಮತ್ತು 5 ನೇ ಆರೋಪಿತರು ನನ್ನ ಮಗಳಿಗೆ ಸೀಮೆ ಎಣ್ಣೆ ಹಾಕಿದ್ದರು. 2 ಮತ್ತು 5 ನೇ ಆರೋಪಿತರು ಸೌದೆ ಸೀಳಿಂದ ನನ್ನ ಮಗಳ ಮೈಕೈಗೆ ಹೊಡೆದಿದ್ದರು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ 1,2,4 ಮತ್ತು 5 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಪ್ರಾಜ್ಞ ಸ.ಸ.ಅ ರವರು  ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ಮನೆ ಕೆಲಸ ಮಾಡಿಲ್ಲ ಎನ್ನುವ ವಿಚಾರಕ್ಕೆ ಆರೋಪಿತರುಗಳು ನನ್ನ ಮಗಳಿಗೆ ಬೈದು ಕೈಗಳಿಂದ ಹೊಡೆದು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡುತ್ತಿದ್ದರು ಎಂದು ಚಾಸಾ 1 ರವರು ನನಗೆ ತಿಳಿಸಿದ್ದರು ಎಂದರೆ ಸರಿ. ದಿಃ04.07.2014 ರಂದು ಮದ್ಯಾಹ್ನ 3 ಗಂಟೆಯಲ್ಲಿ ಆರೋಪಿತರುಗಳು ಚಾಸಾ 1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಗಲಾಟೆ ಮಾಡಿ ಮನೆಯಿಂದ ಹೊರ ಹಾಕಿರುತ್ತಾರೆ ಎಂದರೆ ಸರಿ. ನಡೆದ ವಿಚಾರವನ್ನು ಊರ ಯಜಮಾನರಿಗೆ ತಿಳಿಸಿದಾಗ ಅವರು ಪೊಲೀಸರಿಗೆ ದೂರು ನೀಡುವಂತೆ ತಿಳಿಸಿದ ಮೇರೆಗೆ ಚಾಸಾ 1 ರವರಿಂದ ದೂರು ಕೊಡಿಸಿರುತ್ತೇವೆ ಎಂದರೆ ಸರಿ. ಪ್ರಕರಣದ ಸಂಬಂದ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ

ಘಟನೆ ನಡೆದಾಗ ಸಮಯ ಮದ್ಯಾಹ್ನ 2 ರಿಂದ 3 ಆಗಿತ್ತು. ಘಟನೆಯನ್ನು ನಾನು ಕಣ್ಣಾರೆ ಕಂಡಿಲ್ಲ. ಆರೋಪಿತರು ನನ್ನ ಮಗಳಿಗೆ ಯಾವುದೇ ರೀತಿಯಲ್ಲಿ ಬೈದಿಲ್ಲ, ಹೊಡೆದಿಲ್ಲ, ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ. ಊರ ಯಜಮಾನರ ಹೆಸರು ನಂಜುಂಡಯ್ಯ, ಸಿದ್ದರಾಜು ಮತ್ತು ಕೆಂಪಯ್ಯ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರು ಕೂಡ ಆರೋಪಿತರ ವಿರುದ್ದ ಸುಳ್ಳು ದೂರು ಕೊಡಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**